ಮುಟ್ಟಿದವನು ವಾಸುದೇವನೇ. ಮತ್ತೊಮ್ಮೆ ಜಟ್ಟಿ ಕಾಳಗ. ಎಲ್ಲಾ ಸಹಪಾಠಿಗಳು ಜೊತೆಯಾಗಿ ಮೇಲೆರಗಿದರೂ ವಾಸುದೇವ ಮಿಸುಕಾಡಲಿಲ್ಲ. ಆದರೆ ವಾಸುದೇವನ ಒಂದು ಹೊಡೆತಕ್ಕೆ ಎಲ್ಲರೂ ಮುಗ್ಗರಿಸಿ ಬಿದ್ದರು. "ನೀರು ದಾಟುವುದರಲ್ಲಿ ಇವನು ಆಂಜನೇಯ, ಭಾರ ಎತ್ತುವುದರಲ್ಲಿ ಇವನು ಭೀಮಸೇನ" ಎಂದು ಸಹಪಾಠಿಗಳು ಉದ್ಗರಿಸುತ್ತಿದ್ದರು.

ಗುರು ತೋಟಂತಿಲ್ಲಾಯರಿಗೆ ಈ ಹುಡುಗ ಯಾವಾಗಲೂ ಆಟ ಆಡುತ್ತಿರುತ್ತಾನೆ, ಕೂತು ಓದುವುದಿಲ್ಲ ಎಂದು ಅನ್ನಿಸಿತು. ಒಮ್ಮೆ ಅವರು ಅವನನ್ನು ಹೀಗೆ ಹಂಗಿಸಿದರು: "ಓಹೋ, ಭಾರಿ ಬೃಹಸ್ಪತಿ ನೀನು! ಓದದೆಯೆ ಎಲ್ಲ ಬಂದುಬಿಡುತ್ತದೆ ಅಲ್ಲವೇ? ಹಾಗಾದರೆ ಈ ಮೊದಲು ಪಾಠ ಮಾಡಿದ ಸೂಕ್ತಗಳನ್ನು ಹೇಳಿ ತೋರಿಸು, ನೋಡೋಣ."

ವಾಸುದೇವ ಪದ್ಮಾಸನ ಹಾಕಿ ಕುಳಿತ. ಅವರು ಕೇಳಿದ ಎಲ್ಲಾ ಸೂಕ್ತಗಳನ್ನು ಸ್ವರಶುದ್ಧವಾಗಿ ಹೇಳಿ ತೋರಿಸಿದ. ಅಂದಿನಿಂದ ತೋಟಂತಿಲ್ಲಾಯರು ಈ ಶಿಷ್ಯನನ್ನು ಪರೀಕ್ಷೆ ಮಾಡುವ ಸಾಹಸಕ್ಕೆ ಇಳಿಯಲಿಲ್ಲ.

### ಸಂನ್ಯಾಸ ಸ್ವೀಕಾರ

ಈಗ ವಾಸುದೇವನಿಗೆ ಹನ್ನೊಂದು ವರ್ಷ. ಒಂದು ಮುಂಜಾನೆ ಎದ್ದವನೇ ನೇರ ಉಡುಪಿಗೆ ಬಂದ. ಅಲ್ಲಿ ಆಗ ಅಚ್ಯುತಪ್ರೇಕ್ಷರೆಂಬ ಖ್ಯಾತ ಯತಿಗಳು ನೆಲಸಿದ್ದರು. ವಾಸುದೇವ ಅವರ ಶಿಷ್ಯತ್ವ ಸ್ವೀಕರಿಸಿ ಮಠದಲ್ಲೇ ನಿಂತುಬಿಟ್ಟ. ಮನೆಯಲ್ಲಿ ಮಗ ಕಾಣೆಯಾದದ್ದನ್ನು ಕಂಡು ನಡಿಯಲ್ಲಾಯರು ಹುಡುಕಿಕೊಂಡು ಬಂದರು. ಮಗ ಹೇಳಿದ, "ನನ್ನ ಬದುಕಿನ ಉದ್ದೇಶವನ್ನು ನಾನು ಪೂರೈಸಬೇಕಾಗಿದೆ. ನನ್ನನ್ನು ನನ್ನಷ್ಟಕ್ಕೆ ಬಿಟ್ಟುಬಿಡಿ. ನಾನು ಸಂನ್ಯಾಸಿಯಾಗಲಿದ್ದೇನೆ." ವಾಸುದೇವನ ಅನಂತರ ಹುಟ್ಟಿದ್ದ ಇಬ್ಬರು ಗಂಡುಮಕ್ಕಳು ಚಿಕ್ಕಂದಿನಲ್ಲೇ ತೀರಿಕೊಂಡಿದ್ದರು. ಇದ್ದ ಒಬ್ಬ ಮಗನು ಸಂನ್ಯಾಸಿಯಾಗುತ್ತೇನೆ ಎಂದರೆ ಆ ವಯಸ್ಸಾದ ತಂದೆಗೆ ಹೇಗಾಗಬೇಡ. ಆದರೆ ಮಗ ತಾನು ಹಿಡಿದ ಛಲ ಬಿಡಲಿಲ್ಲ. ಆಗ ದಿಕ್ಕು ತೋರದೆ ನಡಿಯಲ್ಲಾಯರು ಮಗನ ಕಾಲಿಗೆ ಬಿದ್ದು ಬೇಡಿಕೊಂಡರು, "ನಿನ್ನ ದಮ್ಮಯ್ಯ, ಸಂನ್ಯಾಸ ತೆಗೆದುಕೊಂಡು ಈ ವಯಸ್ಸಿನಲ್ಲಿ ನಮ್ಮನ್ನು ಅನಾಥರನ್ನಾಗಿ ಮಾಡಬೇಡ." ವಾಸುದೇವ ಹೇಳಿದ, "ಅಪ್ಪಾ, ಸಂನ್ಯಾಸಿಯಲ್ಲದ ಮಗನಿಗೆ ತಂದೆ ನಮಸ್ಕರಿಸುವುದು ತಪ್ಪು. ನೀವೀಗ ನನಗೆ ನಮಸ್ಕರಿಸಿದ್ದರಿಂದ, 'ನಾನು ಸಂನ್ಯಾಸಿ' ಎಂದು ನೀವು ಒಪ್ಪಿಕೊಂಡಂತೆಯೇ ಆಯಿತು."

ಹೀಗೆ ತಂದೆ ಮಗನಿಗೆ ಎಷ್ಟೋ ವಾದವಿವಾದ ನಡೆಯಿತು. ಮಗ ಎಲ್ಲಾ ವಾದಗಳಿಗೂ ಉತ್ತರಕೊಟ್ಟ. ಆಗ ತಂದೆ, "ನನ್ನನ್ನು ನೀನು ವಾದಿಸಿ ಗೆಲ್ಲಬಹುದು. ಆದರೆ ನಿನ್ನ ತಾಯಿಯನ್ನು ಒಪ್ಪಿಸುವುದು ಅಷ್ಟು ಸುಲಭವಲ್ಲ" ಎಂದು ಹೇಳಿದರು. "ತಾಯಿಯನ್ನು ಒಪ್ಪಿಸುವ ಕೆಲಸ ನನಗೆ ಬಿಡು" ಎಂದ ವಾಸುದೇವ.


ಸರಿ, ಮನೆಗೆ ಬಂದ ನಡಿಯಲ್ಲಾಯರು ಹೆಂಡತಿಯನ್ನು ಎಚ್ಚರಿಸಿದರು. "ವಾಸುದೇವ ಬಂದು ಕೇಳಿದರೆ ಎಷ್ಟು ಮಾತ್ರಕ್ಕೂ ಸಂನ್ಯಾಸಕ್ಕೆ ಒಪ್ಪಿಗೆ ಕೊಡಬೇಡ" ಎಂದರು. ಆದರೆ ವಾಸುದೇವನಿಗೆ ಗೊತ್ತಿತ್ತು, ತನ್ನ ಕಾರ್ಯ ಹೇಗೆ ಸಾಧಿಸಬೇಕೆಂಬುದು. ತಾಯಿ ಕೇಳುವುದಕ್ಕೆ ಮುಂಚೆಯೇ ಹೇಳಿದ, "ಅಮ್ಮ, ನಿನ್ನ ಮಗ ನಿನ್ನ ಕಣ್ಣು ಮುಂದೆ ಇರಬೇಕು ಎಂದಿದ್ದರೆ, ನನಗೆ ಸಂನ್ಯಾಸಕ್ಕೆ ಒಪ್ಪಿಗೆ ಕೊಡು: ಇಲ್ಲವೇ ಈ ಮಗನ ಆಸೆ ಬಿಟ್ಟುಬಿಡು. ಎಂದೆಂದಿಗೂ ನಿನ್ನ ಪಾಲಿಗೆ ನಾನು ಇಲ್ಲವಾದಂತೆಯೇ ಎಂದು ತಿಳಿ." ತಾಯಿ ನಿಸ್ಸಹಾಯಕಳಾಗಿ ಒಪ್ಪಿಗೆ ನೀಡಿದರು. ಆದರೆ ಕೇಳಿದರು, "ವಾಸುದೇವ, ಮುಪ್ಪಿನ ಕಾಲಕ್ಕೆ ನಮ್ಮನ್ನು ನೋಡಿಕೊಳ್ಳುವವರು ಯಾರೋ?" ಅದಕ್ಕೆ ವಾಸುದೇವ ಹೇಳಿದ, "ನಿಮ್ಮನ್ನು ನೋಡಿಕೊಳ್ಳಲು ಇನ್ನೊಬ್ಬ ಮಗ ಹುಟ್ಟುವ ತನಕ ನಾನು ಸಂನ್ಯಾಸಿಯಾಗುವುದಿಲ್ಲ, ಸರಿ ತಾನೆ?"

ತಾಯಿ ವೇದವತಿ ಮುಂದಿನ ವರ್ಷವೇ ಒಂದು ಗಂಡು ಮಗುವನ್ನು ಪಡೆದರು. ಆ ಮಗನೇ ಕಡೆಯವರೆಗೂ ತಂದೆತಾಯಿಯರ ಸೇವೆ ಮಾಡಿ, ಕೊನೆಗೆ ಆಚಾರ್ಯರ ಬಳಿ ಸಂನ್ಯಾಸ ಸ್ವೀಕರಿಸಿ, ವಿಷ್ಣುತೀರ್ಥರೆಂದು ಪ್ರಸಿದ್ಧರಾದರು; ಜೀವಮಾನವನ್ನೆಲ್ಲಾ ಎಲೆ, ಹಣ್ಣು ತಿಂದು ಕಠಿಣ ತಪಸ್ಸನ್ನಾಚರಿಸಿದ ಮಹಾಯೋಗಿಗಳು ಅವರು. ಅಣ್ಣನಿಗೆ ತಕ್ಕ ತಮ್ಮ.


ವಾಸುದೇವ ಅಚ್ಯುತಪ್ರೇಕ್ಷರ ಬಳಿ ಸಂನ್ಯಾಸ ದೀಕ್ಷೆ ಪಡೆದು ದಂಡಧಾರಿಯಾದ 'ಪೂರ್ಣಪ್ರಜ್ಞ' ರಾದರು. ಆಗಿನ್ನೂ ಪೂರ್ಣಪ್ರಜ್ಞರಿಗೆ ಹನ್ನೆರಡು ವರ್ಷ. ಸಂನ್ಯಾಸಿಯಾಗಿ ನಲವತ್ತು ದಿನಗಳಷ್ಟೇ ಸಂದಿವೆ; ಆ ಸಮಯದಲ್ಲಿ ಪ್ರಚಂಡ ತಾರ್ಕಿಕರಾದ ವಾಸುದೇವ ಪಂಡಿತ ಮುಂತಾದವರು ವಿಜಯಪತ್ರದೊಡನೆ ಉಡುಪಿಗೆ ಬಂದರು. ಅಚ್ಯುತಪ್ರೇಕ್ಷರು ತಮ್ಮ ಹೊಸ ಶಿಷ್ಯನನ್ನು ಅವರ ಜೊತೆ ವಾದಕ್ಕೆ ಕಳುಹಿಸಿದರು. ಹನ್ನೆರಡರ ಹರೆಯದ ಪೂರ್ಣಪ್ರಜ್ಞರು ದಿಗಂತವಿಖ್ಯಾತರಾದ ಆ ಪಂಡಿತರನ್ನು ಸುಲಭವಾಗಿ ನಿರುತ್ತರಗೊಳಿಸಿದರು. ಗುರುಗಳು ಶಿಷ್ಯನ ವಿಜಯವನ್ನು ಕಂಡು ಆನಂದಪಟ್ಟರು. ಪೂರ್ಣಪ್ರಜ್ಞರನ್ನು ವೇದಾಂತ ಪೀಠದಲ್ಲಿ ಕುಳ್ಳಿರಿಸಿ ಅಭಿಷೇಕಗೈದು 'ಆನಂದತೀರ್ಥ' ಎಂದು ನಾಮಕರಣ ಮಾಡಿದರು. ಆಚಾರ್ಯರ ಆಶ್ರಮ ನಾಮಧೇಯ 'ಪೂರ್ಣಪ್ರಜ್ಞ' ಎಂದು. ವೇದಾಂತಸಾಮ್ರಾಜ್ಯದಲ್ಲಿ ಅಭಿಷಿಕ್ತರಾದಾಗ ಇಟ್ಟ ಹೆಸರು 'ಆನಂದತೀರ್ಥ.' ಮುಂದೆ ಅವರು ಈ ಹೆಸರಿನಿಂದಲೇ ಪ್ರಖ್ಯಾತರಾದರು.

ಇನ್ನೊಮ್ಮೆ ಬುದ್ಧಿಸಾಗರನೆಂಬ ಬೌದ್ಧ ವಿದ್ವಾಂಸ ಅಚ್ಯುತಪ್ರೇಕ್ಷರ ಮಠಕ್ಕೆ ಬಂದಿದ್ದ. ಮೊದಲು ವೈದಿಕ ಧರ್ಮಾವಲಂಬಿಯಾಗಿದ್ದು, ಅನಂತರ ಬುದ್ಧಿಸಾಗರನ ಜೊತೆ ವಾದದಲ್ಲಿ ಸೋತು, ಅವನ ಶಿಷ್ಯನಾಗಿ ಬೌದ್ಧಧರ್ಮವನ್ನು ಸ್ವೀಕರಿಸಿದ್ದ ವಾದಿಸಿಂಹನೆಂಬ ತರ್ಕ ವಿದ್ವಾಂಸನೊಬ್ಬನು ಅವನ ಜೊತೆಗಿದ್ದ. ದೇಶದ ಎಲ್ಲೆಡೆ ಸಂಚರಿಸಿ ವಾದದಲ್ಲಿ ಜಯಪತ್ರ ಪಡೆದು ಬಂದ ಈ ಬೌದ್ಧ ವಿದ್ವಾಂಸನನ್ನು ಪೂರ್ಣಪ್ರಜ್ಞರು ನಿರುತ್ತರಗೊಳಿಸಿದರು.

(ಮುಂದುವರಿಯುವುದು)




# ಪುಸ್ತಕ ಪರಿಚಯ




**೧. ವಿವೇಕಾನಂದ (ಅದಮ್ಯ ಶಕ್ತಿಯ ನೆಲೆ–ಅನವರತ ಸ್ಫೂರ್ತಿಯ ಸೆಲೆ)** ಪುಟ: ೪೮ ; ಬೆಲೆ: ರೂ. ೫/–

**೨. ಮನುಕುಲಕ್ಕೆ ಸ್ವಾಮಿ ವಿವೇಕಾನಂದರ ಸಂದೇಶ** ಪುಟ: ೩೨; ಬೆಲೆ: ರೂ. ೫/–

**ಎರಡೂ ಕೃತಿಗಳ ಮೂಲ ಇಂಗ್ಲಿಷ್ ಲೇಖಕರು : ಸ್ವಾಮಿ ಹರ್ಷಾನಂದ**

**ಕನ್ನಡಕ್ಕೆ ಅನುವಾದ : ಎನ್ ಪ್ರಭಾಕರ್**

**ಪ್ರಕಾಶಕರು : ರಾಮಕೃಷ್ಣ ಮಠ, ಬೆಂಗಳೂರು –೫೬೦ ೦೧೯**

ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ಕುರಿತ ಪುಸ್ತಕಗಳನ್ನು ಓದದ ಯಾವ ಶಾಲಾಕಾಲೇಜು ಶಿಕ್ಷಣವೂ ಸಂಪೂರ್ಣವಾಗುವುದಿಲ್ಲ. ಆದ್ದರಿಂದ ಶಿಕ್ಷಣ ಪಠ್ಯಕ್ರಮದಲ್ಲಿ ವಿವೇಕಾನಂದ ಸಾಹಿತ್ಯದಿಂದ ಎತ್ತಿಕೊಂಡ ಭಾಗಗಳನ್ನು ಕಡ್ಡಾಯವಾಗಿ ಸೇರಿಸಬೇಕು. ಆಗ ಮಾತ್ರ ವ್ಯಕ್ತಿತ್ವವಿಕಾಸ, ಉತ್ತಮ ಸಮಾಜನಿರ್ಮಾಣಗಳು ಸುಲಭಸಾಧ್ಯವಾಗಿ ವಿಶ್ವಮಾನವ ಸಂದೇಶದ ಸುಂದರ ಕನಸು ನನಸಾಗುತ್ತದೆ. ಆದ್ದರಿಂದ ಸ್ವಾಮೀಜಿಯನ್ನು ಕುರಿತ ನಾನಾ ರೀತಿಯ ಪುಸ್ತಕಗಳು ಹೆಚ್ಚು ಹೆಚ್ಚು ಬಂದಷ್ಟೂ ಒಳ್ಳೆಯದು. ಮೊದಲು ಅಗತ್ಯವಾಗಿರುವುದು, ಮಕ್ಕಳಿಗೆ, ಕಿಶೋರವಯಸ್ಸಿನವರಿಗೆ ಮತ್ತು ಯುವಜನರಿಗೆ ವಿವೇಕಾನಂದರ ಜೀವನಚರಿತ್ರೆ ಮತ್ತು ಸಂದೇಶಗಳನ್ನು (ಆಯಾ ವಯೋಮಾನಕ್ಕನುಗುಣವಾಗಿ) ಸರಳವಾದ ಭಾಷೆಯಲ್ಲಿ ಸಂಕ್ಷಿಪ್ತವಾಗಿ ತಿಳಿಸುವ ಪುಸ್ತಕಗಳು. ಈ ಅಗತ್ಯವನ್ನು ಹಾಗೂ ಬೇಡಿಕೆಯನ್ನು ಪೂರೈಸುವ ಹಾಗೆ ಬೆಂಗಳೂರಿನ ರಾಮಕೃಷ್ಣ ಮಠವು ಮೇಲಿನ ಈ ಎರಡು ಕನ್ನಡ ಕಿರುಹೊತ್ತಗೆಗಳನ್ನು ಪ್ರಕಟಿಸಿರುವುದು ಶ್ಲಾಘನೀಯ. ಈ ಎರಡೂ ಚಿಕ್ಕ–ಚೊಕ್ಕ ಕೃತಿಗಳು.

ಮೊದಲು **ವಿವೇಕಾನಂದ** ಪುಸ್ತಕವನ್ನು ಅವಲೋಕಿಸೋಣ. ಬಡವರು ಶ್ರೀಮಂತರು, ಜ್ಞಾನಿಗಳು ಅಜ್ಞಾನಿಗಳು, ಪ್ರಾಪಂಚಿಕರು, ಆಧ್ಯಾತ್ಮಿಕ ಸಾಧಕರು ಮತ್ತು ಎಲ್ಲ ವಯೋಮಾನದ ಪುರುಷರು, ಮಹಿಳೆಯರು ವಿವೇಕಾನಂದರ ಒಂದಲ್ಲ ಒಂದು ವಿಚಾರದಿಂದ ಬೆಳಕು – ಸ್ಫೂರ್ತಿಗಳನ್ನು ಪಡೆದು ಧನ್ಯರಾಗುತ್ತಾರೆ, ಅವರನ್ನು ಮೆಚ್ಚುತ್ತಾರೆ, ಇಷ್ಟಪಡುತ್ತಾರೆ ಎಂದು ಪೂಜ್ಯ ಲೇಖಕರು ಪುಸ್ತಕದ ಪ್ರಸ್ತಾವನೆಯಲ್ಲಿ ಬರೆದಿರುವುದು ವಿಶಿಷ್ಟವಾಗಿದೆ. ಈ ಮಾತು ಮನಸ್ಸನ್ನು ಸೆರೆಹಿಡಿಯುತ್ತದೆ, ಪುಸ್ತಕವನ್ನು ಓದಲು ಆಸಕ್ತಿಯನ್ನು ಮೂಡಿಸುತ್ತದೆ.

ಮೂಲ ಇಂಗ್ಲಿಷ್ ಪುಸ್ತಕ ೨೦೦೪ರಲ್ಲೇ ಪ್ರಕಟವಾಗಿ ಬಹುಜನಪ್ರಿಯವಾಗಿ ಮೂರು ಮುದ್ರಣಗಳನ್ನು ಕಂಡಿದೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ, ಅಷ್ಟು ಸೊಗಸಾಗಿದೆ. ಮುಂದೆ ಶ್ರೇಷ್ಠವ್ಯಕ್ತಿಯಾಗುವ ಎಲ್ಲ ಲಕ್ಷಣಗಳೂ ನರೇಂದ್ರನಿಗೆ ಬಾಲ್ಯದಲ್ಲೇ ಸುವ್ಯಕ್ತವಾಗಿದ್ದವು. ಬಡವರು, ದೀನ ದಲಿತರು ಎಂದರೆ ಅವನ ಹೃದಯ ಮರುಗುತ್ತಿತ್ತು. ನಿರ್ಭಯತೆ, ವೈಚಾರಿಕತೆ, ಮನಸ್ಸಿನ ಏಕಾಗ್ರತೆ, ಓದುವ ಗೀಳು, ಕ್ರೀಡೆ ವ್ಯಾಯಾಮಗಳಲ್ಲಿ ಆಸಕ್ತಿ, ಅಸಾಧಾರಣ ಜ್ಞಾಪಕಶಕ್ತಿ, ಕಷ್ಟದಲ್ಲಿರುವವರ ನೆರವಿಗೆ ಧಾವಿಸುವ ಗುಣ – ಇತ್ಯಾದಿ ಕೆಲವೇ ಮಾತುಗಳಲ್ಲಿ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವದ ಎಲ್ಲ ಗುಣಗಳನ್ನೂ ಅಡಕಮಾಡಿ ಪೂಜ್ಯ ಸ್ವಾಮಿ ಹರ್ಷಾನಂದಜಿ ಅವರು ಬರೆದಿದ್ದಾರೆ. ಕಥನದ ಉದ್ದಕ್ಕೂ ಹೀಗೆ ಸಂಕ್ಷಿಪ್ತವಾಗಿ ಹೇಳುವ ಕಲೆ, ಭಾಷೆಯ ಹಿಡಿತ ಅವರಿಗೆ